## ರಾಷ್ಟ್ರೀಯ ಹಸಿರು ಪೀಠ ಛಡಿಯೇಟು

# ಬೆಳ್ಳಂದೂರು ಕೆರೆ ಮಾಲಿನ್ಯ: ರಾಜ್ಯಕ್ಕೆ 75 ಕೋಟಿ ದಂಡ!

## ಬೆಳ್ಳಂದೂರು ಕೆರೆ ಶುದ್ಧೀಕರಿಸುವಲ್ಲಿ ವೈಫಲ್ಯ ಹಿನ್ನೆಲೆ ರಾಜ್ಯ ಸರ್ಕಾರ, ಬಿಬಿಎಂಪಿಗೆ ದಂಡ ವಿಧಿಸಿದ ಎನ್‌ಜಿಟಿ

• **ಕನ್ನಡಪ್ರಭ ವಾರ್ತೆ** ನವದೆಹಲಿ

ಜಲಮಾಲಿನ್ಯದ ಕಾರಣಕ್ಕೆ ಇಡೀ ದೇಶದಲ್ಲಿ ಸುದ್ದಿ ಮಾಡಿದ ಬೆಂಗಳೂರಿನ ಬೆಳ್ಳಂದೂರು ಕೆರೆಗೆ ಸಂಬಂಧಿಸಿದಂತೆ ರಾಷ್ಟ್ರೀಯ ಹಸಿರು ನ್ಯಾಯಾಧಿಕರಣ (ಎನ್‌ಜಿಟಿ) ಕರ್ನಾಟಕ ಸರ್ಕಾರ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯನ್ನು ಹಿಗ್ಗಾಮುಗ್ಗಾ ತರಾಟೆಗೆ ತೆಗೆದುಕೊಂಡಿದೆ. ಕೆರೆಯನ್ನು ಶುದ್ಧಿ ಮಾಡಲು ವಿಫಲವಾಗಿದ್ದಕ್ಕೆ ಕರ್ನಾಟಕ ಸರ್ಕಾರಕ್ಕೆ 50 ಕೋಟಿ ರುಪಾಯಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ 25 ಕೋಟಿ ರುಪಾಯಿ ದಂಡ ವಿಧಿಸಿ ಅದು ಆದೇಶ ಹೊರಡಿಸಿದೆ. ಈ ಹಣವನ್ನು ಕೇಂದ್ರೀಯ ಮಾಲಿನ್ಯ ನಿಯಂತ್ರಣ ಮಂಡಳಿಯಲ್ಲಿ ಕಟ್ಟುವಂತೆ ಅದು ಸೂಚಿಸಿದ್ದು, ಈ ಹಣವನ್ನು ಪರಿಸರ ಪುನರುಜ್ಜೀವನಕ್ಕೆ ಬಳಸಿಕೊಳ್ಳುವಂತೆ ಹೇಳಿದೆ. ➘ 4



### ಎನ್‌ಜಿಟಿ ತರಾಟೆ

- **ಕರ್ನಾಟಕ ಸರ್ಕಾರಕ್ಕೆ ₹50 ಕೋಟಿ, ಬಿಬಿಎಂಪಿಗೆ ₹25 ಕೋಟಿ ದಂಡ**
- ಕೆರೆ ಅಭಿವೃದ್ಧಿಗೆ ಪ್ರತ್ಯೇಕ ಖಾತೆಯಲ್ಲಿ ₹500 ಕೋಟಿ ಇಡಲು ಆದೇಶ
- **ಕೆರೆ ನಿರ್ವಹಣೆಯಲ್ಲಿ ಸರ್ಕಾರ, ಪಾಲಿಗೆ ಸಂಪೂರ್ಣ ವಿಫಲ: ನ್ಯಾಯಾಧಿಕರಣ ಆಕ್ರೋಶ**
- ಆದೇಶ ಪಾಲಿಸದೇ ಹೋದರೆ ಮತ್ತೆ 100 ಕೋಟಿ ದಂಡ: ಎಚ್ಚರಿಕೆ
- **ಬೆಳ್ಳಂದೂರು ಕೆರೆ ಪುನರುಜ್ಜೀವನಕ್ಕೆ 1 ತಿಂಗಳಲ್ಲಿ ಕ್ರಿಯಾಯೋಜನೆ ರೂಪಿಸುವಂತೆ ಗಡುವು**
- ತನ್ನ ಆದೇಶ ಪಾಲನೆ ಉಸ್ತುವಾರಿಗೆ ನ್ಯಾ। ಹೆಗ್ಡೆ ನೇತೃತ್ವದಲ್ಲಿ ಸಮಿತಿ ರಚನೆ
- **ಜನರು ದೂರು ಸಲ್ಲಿಸಲು ವೆಬ್‌ಸೈಟ್ ರೂಪಿಸುವಂತೆ ಸೂಚನೆ**